**ಕರ್ನಾಟಕ ಸರ್ಕಾರ**

**ನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) , 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012**

**ಇ-ಮೇಲ್:commissioner.pue@gmail.com ಸ್ಥಿರ ದೂರವಾಣಿ ಸಂ:080-23562033**

ಸಂಖ್ಯೆ: E1963581-DPUE-ACA0OTH/375/2025 ದಿನಾಂಕ: 20-11-2025

# ಸುತ್ತೋಲೆ

ವಿಷಯ: 2026ರ ಫೆಬ್ರವರಿ–ಮಾರ್ಚ್ ತಿಂಗಳಲ್ಲಿ ನಡೆಯುವ ದ್ವಿತೀಯ ಪಿಯುಸಿ ಅಂತಿಮ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳ ಸಾಧನೆ ಹೆಚ್ಚಿಸಲು ಎರಡು ಪೂರ್ವಸಿದ್ಧತಾ ಪರೀಕ್ಷೆಗಳನ್ನು ನಡೆಸುವ ಕುರಿತು.

ಉಲ್ಲೇಖ:
1. 2025-26ನೇ ಸಾಲಿನ ಶೈಕ್ಷಣಿಕ ಅವಧಿ ಪ್ರಕಟ ದಿನಾಂಕ: 20-2-2025.
2. ಈ ಕಛೇರಿಯ ಸುತ್ತೋಲೆ ಸಂಖ್ಯೆ:DPUE-ACA0OTH/325/2025 ದಿನಾಂಕ: 28-09-2025.

-*-

2026 ರ ಫೆಬ್ರವರಿ-ಮಾರ್ಚ್ ತಿಂಗಳಿನಲ್ಲಿ ನಡೆಯುವ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳ ಫಲಿತಾಂಶದ ಸುಧಾರಣೆಗಾಗಿ ಎರಡು ಪೂರ್ವಸಿದ್ಧತಾ ಪರೀಕ್ಷೆಗಳನ್ನು ನಡೆಸಲು, ಈ ಕೆಳಗಿನ ಸೂಚನೆಗಳನ್ನು ಪಾಲಿಸುವಂತೆ ಎಲ್ಲಾ ಜಿಲ್ಲಾ ಉಪ ನಿರ್ದೇಶಕರಿಗೆ ಮತ್ತು ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ ತಿಳಿಸಿದೆ.

1 ಉಲ್ಲೇಖ 1 ರ ಪ್ರಕಾರ, 2025-26ನೇ ಶೈಕ್ಷಣಿಕ ಸಾಲಿನ ಕಾರ್ಯಕ್ರಮದಲ್ಲಿ 2026 ರ ಜನವರಿ ತಿಂಗಳಿನಲ್ಲಿ ಪೂರ್ವಸಿದ್ಧತಾ ಪರೀಕ್ಷೆಗಳನ್ನು ನಡೆಸುವಂತೆ ಈಗಾಗಲೇ ಸೂಚನೆ ನೀಡಲಾಗಿರುತ್ತದೆ. ಪ್ರಸ್ತುತ ಈ ಪರೀಕ್ಷೆಗಳನ್ನು ಜಿಲ್ಲಾ ಮಟ್ಟದಲ್ಲಿ ಪ್ರಶ್ನೆಪತ್ರಿಕೆಗಳನ್ನು ಸಿದ್ದಪಡಿಸಿ, ವೇಳಾಪಟ್ಟಿಯನ್ನು ತಯಾರಿಸಿ ನಡೆಸಲಾಗುತ್ತಿದೆ.

2 ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ, ಅವರ ಬರವಣಿಗೆ ಅಭ್ಯಾಸ, ಪರೀಕ್ಷಾ ವಿಧಾನಗಳ ತಿಳುವಳಿಕೆ, ಸಮಯ ಪಾಲನೆ ಮತ್ತು 2026ರ ಫೆಬ್ರವರಿ-ಮಾರ್ಚ್ ತಿಂಗಳಿನಲ್ಲಿ ನಡೆಯುವ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ ತೆಗೆದುಕೊಳ್ಳಲು ಆತ್ಮವಿಶ್ವಾಸ ಹೆಚ್ಚಿಸುವ ದೃಷ್ಟಿಯಿಂದ, ಈ ಶೈಕ್ಷಣಿಕ ವರ್ಷದಲ್ಲಿ **ಎರಡು ಪೂರ್ವಸಿದ್ಧತಾ ಪರೀಕ್ಷೆ ನಡೆಸಲು ತೀರ್ಮಾನಿಸಲಾಗಿದೆ.**

3 ಮಧ್ಯವಾರ್ಷಿಕ ಪರೀಕ್ಷೆಗಳ ಸಮಯದಲ್ಲಿ, ಪ್ರತಿಯೊಂದು ಜಿಲ್ಲೆಯಲ್ಲಿ ಪ್ರತ್ಯೇಕ ವೇಳಾಪಟ್ಟಿ ಅನುಸರಿಸಿದ್ದರಿಂದ, ಪರೀಕ್ಷೆಯ ನಡೆಸುವಿಕೆ, ಮೌಲ್ಯಮಾಪನ ಮತ್ತು SATS ಪೋರ್ಟಲ್ ನಲ್ಲಿ ಅಂಕಗಳ ನಮೂದು ಪ್ರಕ್ರಿಯೆಗಳು ಪರೀಕ್ಷೆ ಮುಗಿದ ಒಂದು ತಿಂಗಳ ನಂತರವೂ ಪೂರ್ಣಗೊಳ್ಳದಿರುವುದನ್ನು ಗಮನಿಸಲಾಗಿದೆ. ಆದ್ದರಿಂದ, **ಪೂರ್ವಸಿದ್ಧತಾ ಪರೀಕ್ಷೆ–1 ಮತ್ತು ಪೂರ್ವಸಿದ್ಧತಾ ಪರೀಕ್ಷೆ–2 ಗಳಿಗಾಗಿ ಏಕರೂಪ ವೇಳಾಪಟ್ಟಿಯನ್ನು ಕೇಂದ್ರ ಕಛೇರಿಯಿಂದ ನೀಡಲಾಗುತ್ತದೆ.**

4 ಪೂರ್ವಸಿದ್ಧತಾ ಪರೀಕ್ಷೆಗಳಲ್ಲಿ ಪ್ರಶ್ನೆಪತ್ರಿಕೆಗಳ ಗುಣಮಟ್ಟ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳ ಮಟ್ಟಕ್ಕೆ ಹೊಂದಿಕೊಳ್ಳುವಂತೆ ನೋಡಿಕೊಳ್ಳಲು, ಎರಡೂ **ಪೂರ್ವಸಿದ್ಧತಾ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳನ್ನು (ಪಿ.ಡಿ.ಎಫ್ ಪ್ರತಿ) ರಾಜ್ಯ ಹಂತದಲ್ಲಿ ಒದಗಿಸಲಾಗುತ್ತದೆ.**

5 ಪ್ರಶ್ನೆಪತ್ರಿಕೆಗಳ ಮುದ್ರಣ ಮತ್ತು ವಿತರಣೆ ಪ್ರಕ್ರಿಯೆಯನ್ನು ಯಥಾಸ್ಥಿತಿಯಾಗಿ ಜಿಲ್ಲಾಮಟ್ಟದಲ್ಲೇ ಮುಂದುವರಿಸಲಾಗುತ್ತದೆ. ಈ ಸಂಬಂಧ ಯಾವುದೇ ಬದಲಾವಣೆ ಮಾಡಲಾಗುವುದಿಲ್ಲ.

6 ವಿದ್ಯಾರ್ಥಿ ದಾಖಲಾತಿ ಸಮಯದಲ್ಲಿ ಪಡೆಯಲಾದ ಪರೀಕ್ಷಾ ಶುಲ್ಕದಲ್ಲಿಯೇ ಪೂರ್ವಸಿದ್ಧತಾ ಪರೀಕ್ಷೆ-1 ರ ವೆಚ್ಚವನ್ನು ಭರಿಸುವುದು.

7 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ನಡೆಸುವ ಪೂರ್ವಸಿದ್ಧತಾ ಪರೀಕ್ಷೆ-2 ರ ಪ್ರಶ್ನೆಪತ್ರಿಕೆಗಳ ಮುದ್ರಣಾ ವೆಚ್ಚ ಮತ್ತು ಉತ್ತರಪತ್ರಿಕೆ ಸರಬರಾಜು ವೆಚ್ಚವನ್ನು ಇಲಾಖೆಯಿಂದ ನೀಡಲಾಗುವುದು. ಪೂರ್ವಸಿದ್ಧತಾ ಪರೀಕ್ಷೆ-2 ರ ವೆಚ್ಚಕ್ಕೆ ಸಂಬಂಧಿಸಿದಂತೆ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿನ ಯಾವುದೇ ವಿದ್ಯಾರ್ಥಿಗಳಿಂದ ಶುಲ್ಕವನ್ನು ಪಡೆಯತಕ್ಕದ್ದಲ್ಲ. **ಒಂದುವೇಳೆ ಶುಲ್ಕವನ್ನು ಪಡೆದಿರುವುದು ಕಂಡುಬಂದಲ್ಲಿ ಕಾಲೇಜಿನ ಪ್ರಾಂಶುಪಾಲರನ್ನೇ ನೇರ ಹೊಣೆಗಾರರನ್ನಾಗಿಸಲಾಗುವುದು.**

8 ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಇಲಾಖೆಯು ಸೂಚಿಸುವಂತೆ, ಎರಡು ಪೂರ್ವಸಿದ್ಧತಾ ಪರೀಕ್ಷೆಗಳನ್ನು ನಡೆಸಿ, ಪ್ರತಿ ವಿಷಯವಾರು ಪರೀಕ್ಷೆಗಳು ಮುಗಿದ ನಂತರ ಮುಂದಿನ ಮೂರು ದಿನದೊಳಗಾಗಿ ಉತ್ತರಪತ್ರಿಕೆಗಳ ಮೌಲ್ಯಮಾಪನ ಮಾಡಲು ತಿಳಿಸಿದೆ.

9 ಉತ್ತರಪತ್ರಿಕೆಗಳ ಮೌಲ್ಯಮಾಪನವನ್ನು ಸಂಬಂಧಿಸಿದ ವಿಷಯವಾರು ಉಪನ್ಯಾಸಕರು ಕಾಲೇಜು ಮಟ್ಟದಲ್ಲೇ ನಡೆಸಬೇಕು. ಪೂರ್ವಸಿದ್ಧತಾ ಪರೀಕ್ಷೆ–1 ಮತ್ತು ಪೂರ್ವಸಿದ್ಧತಾ ಪರೀಕ್ಷೆ–2ರ ಅಂಕಗಳನ್ನು SATS ಪೋರ್ಟಲ್‌ನಲ್ಲಿ ನಮೂದಿಸಲು ಸೂಕ್ತ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಪೂರ್ವಸಿದ್ದತಾ ಪರೀಕ್ಷೆಯ ಅಂಕಗಳು ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಫಲಿತಾಂಶಗಳ ಮೇಲೆ ಯಾವುದೇ ರೀತಿಯ ಪ್ರಭಾವ ಬೀರುವುದಿಲ್ಲ ಎಂಬುದನ್ನು ಸ್ಪಷ್ಟಪಡಿಸಲಾಗುತ್ತದೆ. **SATS ನಮೂದು ಕೇವಲ ಶೈಕ್ಷಣಿಕ ವಿಶ್ಲೇಷಣೆ ಮತ್ತು ಮೇಲ್ವಿಚಾರಣೆಗಾಗಿ ಮಾತ್ರ ಇರುತ್ತದೆ.**

10 ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಪೂರ್ವಸಿದ್ದತಾ ಪರೀಕ್ಷೆ-2 ಅನ್ನು ನಡೆಸುವುದು ಕಡ್ಡಾಯವಾಗಿರುತ್ತದೆ. ಅನುದಾನಿತ ಮತ್ತು ಅನುದಾನರಹಿತ ಪದವಿ ಪೂರ್ವ ಕಾಲೇಜಗಳು ಪರೀಕ್ಷೆಯನ್ನು ನಡೆಸಲು ಬಯಸಿದರೆ, ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರಿಂದ ಸಾಮಾನ್ಯ ಪ್ರಶ್ನೆಪತ್ರಿಕೆಗಳನ್ನು (ಸದರಿ ಸುತ್ತೋಲೆಯ ಕ್ರಮ ಸಂಖ್ಯೆ4 ರಲ್ಲಿ ತಿಳಿಸಲಾದಂತೆ) ಪಡೆದುಕೊಳ್ಳಬಹುದು.

11 ಪೂರ್ವಸಿದ್ಧತಾ ಪರೀಕ್ಷೆ–1 ಮತ್ತು ಪೂರ್ವಸಿದ್ಧತಾ ಪರೀಕ್ಷೆ–2 ರ ವೇಳಾಪಟ್ಟಿಯನ್ನು ಕ್ರಮವಾಗಿ ಅನುಬಂಧ-1 ಮತ್ತು ಅನುಬಂಧ-2 ರಲ್ಲಿ ನೀಡಲಾಗಿದೆ.

12 ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರು ಈ ಸಂಪೂರ್ಣ ಪ್ರಕ್ರಿಯೆಯನ್ನು ಸುಗಮವಾಗಿ ಮತ್ತು ಶಿಸ್ತಿನಿಂದ ನಡೆಸುತ್ತಿರುವ ಬಗ್ಗೆ ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರು ಖಚಿತಪಡಿಸಿಕೊಳ್ಳಲು ಸೂಚಿಸಿದೆ.

13 ಪರೀಕ್ಷಾ ಪ್ರಕ್ರಿಯೆಯ ಗೌಪ್ಯತೆ ಕಾಪಾಡುವಲ್ಲಿ ಯಾವುದಾದರೂ ನಿರ್ಲಕ್ಷ್ಯ ಕಂಡುಬಂದರೆ, ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರು ಹಾಗೂ ಕಾಲೇಜಿನ ಪ್ರಾಚಾರ್ಯರನ್ನು ನೇರ ಹೊಣೆಗಾರರನ್ನಾಗಿಸಿ, ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು.

ಮೇಲ್ಕಂಡ ಸೂಚನೆಗಳನ್ನು ಎಲ್ಲಾ ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ತಿಳಿಸಿ, ಪರೀಕ್ಷೆಗಳನ್ನು ವ್ಯವಸ್ಥಿತವಾಗಿ ನಡೆಸಲು ಅಗತ್ಯ ಸಿದ್ದತೆ ಮಾಡಿಕೊಳ್ಳಲು ಸೂಚಿಸಿದೆ

Digitally signed by
Bharath S
Date: 20-11-2025
12:11:59

ನಿರ್ದೇಶಕರು

ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)

**ಇವರಿಗೆ**:

1. ಎಲ್ಲಾ ಜಿಲ್ಲಾ ಉಪ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)-ಇವರಿಗೆ ಅಗತ್ಯ ಕ್ರಮಕ್ಕಾಗಿ.
2. ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳಿಗೆ-ಜಿಲ್ಲಾ ಉಪ ನಿರ್ದೇಶಕರ ಮೂಲಕ-ಸೂಕ್ತ ಕ್ರಮಕ್ಕಾಗಿ.

**ಪ್ರತಿಗಳು**

1. ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖಾ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ-ಮಾನ್ಯ ಸಚಿವರ ಅವಗಾಹನೆಗೆ ತರಲು ಕೋರಿದೆ.
2. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬೆಂಗಳೂರು-ಇವರಿಗೆ ಮಾಹಿತಿಗಾಗಿ.
3. ಮಾನ್ಯ ಅಧ್ಯಕ್ಷರು, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು-ಮಾಹಿತಿಗಾಗಿ.
4. ಸಹಾಯಕ ನಿರ್ದೇಶಕರು (ಆಡಳಿತ) ನಿರ್ದೇಶಕರ ಕಚೇರಿ, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಮಲ್ಲೇಶ್ವರ, ಬೆಂಗಳೂರು-ಅಗತ್ಯ ಕ್ರಮಕ್ಕಾಗಿ.
5. ಕಛೇರಿ ಪ್ರತಿ.

| TIME TABLE | | | | | | |
|---|---|---|---|---|---|---|
| **PREPARATORY EXAMINATION - 1** | | | | | | |
| DATE AND DAY | SUBJECT NAME | SUBJECT CODE | TIME | | TOTAL TIME | MAX MARKS |
| 02/01/2026 FRIDAY | PSYCHOLOGY | 32 | 10.00AM | 01.00PM | 3hr | 80 |
| | CHEMISTRY | 34 | | | | 70 |
| 03/01/2026 SATURDAY | PHYSICS | 33 | 10.00AM | 01.00PM | 3hr | 70 |
| | BASIC MATHS | 75 | | | | 80 |
| 04/01/2026 SUNDAY | **SUNDAY-HOLIDAY** | | | | | |
| 05/01/2026 MONDAY | POLITICAL SCIENCE | 29 | 10.00AM | 01.00PM | 3hr | 80 |
| | BIOLOGY | 36 | | | | 70 |
| | ELECTRONICS | 40 | | | | 70 |
| | COMPUTER SCIENCE | 41 | | | | 70 |
| 06/01/2026 TUESDAY | GEOGRAPHY | 24 | 10.00AM | 01.00PM | 3hr | 80 |
| | MATHEMATICS | 35 | | | | 80 |
| | HOMESCIENCE | 67 | | | | 70 |
| 07/01/2026 WEDNESDAY | KANNADA | 01 | 10.00AM | 01.00PM | 3hr | 80 |
| | ARABIC | 11 | | | | 80 |
| 08/01/2026 THURSDAY | ENGLISH | 02 | 10.00AM | 01.00PM | 3 hr | 80 |
| 09/01/2026 FRIDAY | HINDI | 03 | 10.00AM | 01.00PM | 3 hr | 80 |
| 10/01/2026 SATURDAY | TAMIL | 04 | 10.00AM | 01.00PM | 3hr | 80 |
| | TELUGU | 05 | | | | 80 |
| | MALAYALAM | 06 | | | | 80 |
| | MARATHI | 07 | | | | 80 |
| | URDU | 08 | | | | 80 |
| | SANSKRIT | 09 | | | | 80 |
| | FRENCH | 12 | | | | 80 |
| 10/01/2026 SATURDAY | HINDUSTANI MUSIC | 26 | 1.30 PM | 3.45 PM | 2 hr 15min | 40 |
| | ELECTRONICS AND HARDWARE | 59 | | | | 60 |
| | APPARELS MADEUPS AND HOME FURNISHING | 60 | | | | 60 |
| | INFORMATION TECHNOLOGY | 61 | | | | 60 |
| | RETAIL | 62 | | | | 60 |
| | AUTOMOBILE | 63 | | | | 60 |
| | HEALTH CARE | 64 | | | | 60 |
| | BEAUTY AND WELLNESS | 65 | | | | 60 |
| 11/01/2026 SUNDAY | **SUNDAY-HOLIDAY** | | | | | |
| 12/01/2026 MONDAY | ECONOMICS | 22 | 10.00AM | 01.00PM | 3 hr | 80 |
| 13/01/2026 TUESDAY | BUISNESS STUDIES | 27 | 10.00AM | 01.00PM | 3hr | 80 |
| | EDUCATION | 52 | | | | 80 |
| 14/01/2026 WEDNESDAY | **MAKARA SANKRANTHI FESTIVAL NO EXAM** | | | | | |
| 15/01/2026 THURSDAY | HISTORY | 21 | 1.30 PM | 04.30PM | 3 hr | 80 |

| | | | | | | |
|---|---|---|---|---|---|---|
| 16/01/2026 FRIDAY | OPTIONAL KANNADA | 16 | 10.00AM | 01.00PM | 3hr | 80 |
| | LOGIC | 23 | | | | 80 |
| | ACCOUNTANCY | 30 | | | | 80 |
| | GEOLOGY | 37 | | | | 80 |
| 17/01/2026 SATURDAY | SOCIOLOGY | 28 | 10.00AM | 01.00PM | 3hr | 80 |
| | STATISTICS | 31 | | | | 80 |

Joint Director (Academic)
Department of School Education (Pre-University)

| TIME TABLE | | | | | | |
|---|---|---|---|---|---|---|
| **PREPARATORY EXAMINATION - 2** | | | | | | |
| DATE AND DAY | SUBJECT NAME | SUBJECT CODE | TIME | | TOTAL TIME | MAX MARKS |
| 19/01/2026 MONDAY | KANNADA | 01 | 10.00 AM | 01.00 PM | 3 hr | 80 |
| | ARABIC | 11 | | | | 80 |
| 20/01/2026 TUESDAY | ENGLISH | 02 | 10.00AM | 01.00 PM | 3hr | 80 |
| 21/01/2026 WEDNESDAY | HISTORY | 21 | 10.00 AM | 01.00 PM | 3 hr | 80 |
| | CHEMISTRY | 34 | | | | 70 |
| 22/01/2026 THURSDAY | ECONOMICS | 22 | 10.00AM | 01.00 PM | 3hr | 80 |
| 23/01/2026 FRIDAY | BUISNESS STUDIES | 27 | 10.00AM | 01.00 PM | 3hr | 80 |
| | PHYSICS | 33 | | | | 70 |
| | EDUCATION | 52 | | | | 80 |
| 24/01/2026 SATURDAY | HINDI | 03 | 10.00AM | 01.00 PM | 3hr | 80 |
| | HOME SCIENCE | 67 | 01.30PM | 04.30 PM | 3 hr | 70 |
| | BASIC MATHS | 75 | | | | 80 |
| 25/01/2026 SUNDAY | **SUNDAY-HOLIDAY** | | | | | |
| 26/01/2026 MONDAY | **REPUBLIC DAY-NO EXAM** | | | | | |
| 27/01/2026 TUESDAY | GEOGRAPHY | 24 | 10.00AM | 01.00 PM | 3hr | 80 |
| | PSYCHOLOGY | 32 | | | | 80 |
| | MATHEMATICS | 35 | | | | 80 |
| 28/01/2026 WEDNESDAY | POLITICAL SCIENCE | 29 | 10.00 AM | 01.00 PM | 3hr | 80 |
| | BIOLOGY | 36 | | | | 70 |
| | ELECTRONICS | 40 | | | | 70 |
| | COMPUTER SCIENCE | 41 | | | | 70 |
| 29/01/2026 THRUSDAY | SOCIOLOGY | 28 | 10.00 AM | 01.00 PM | 3 hr | 80 |
| | STATISTICS | 31 | | | | 80 |
| 30/01/2026 FRIDAY | OPTIONAL KANNADA | 16 | 10.00 AM | 01.00 PM | 3 hr | 80 |
| | LOGIC | 23 | | | | 80 |
| | ACCOUNTANCY | 30 | | | | 80 |
| | GEOLOGY | 37 | | | | 80 |
| 31/01/2026 SATURDAY | TAMIL | 04 | 10.00 AM | 01.00 PM | 3 hr | 80 |
| | TELUGU | 05 | | | | 80 |
| | MALAYALAM | 06 | | | | 80 |
| | MARATHI | 07 | | | | 80 |
| | URDU | 08 | | | | 80 |
| | SANSKRIT | 09 | | | | 80 |
| | FRENCH | 12 | | | | 80 |
| 31/01/2026 SATURDAY | HINDUSTANI MUSIC | 26 | 1.30 PM | 03.45 PM | 2 hr 15 min | 40 |
| | ELECTRONICS AND HARDWARE | 59 | | | | 60 |
| | APPARELS MADEUPS AND HOME FURNISHING | 60 | | | | 60 |
| | INFORMATION TECHNOLOGY | 61 | | | | 60 |
| | RETAIL | 62 | | | | 60 |
| | | | | | | |

| | | | | | | |
|---|---|---|---|---|---|---|
| | AUTOMOBILE | 63 | | | | 60 |
| | HEALTH CARE | 64 | | | | 60 |
| | BEAUTY AND WELLNESS | 65 | | | | 60 |

Joint Director (Academic)
Department of School Education (Pre-University)